### ಬೆಟ್ಟದಡಿ ಸಮಾಧಿಯಾದ ಮನೆಗಳು



ನಾವೆಲ್ಲ ಇಲ್ಲಿನ ಚಹಾ ತೋಟದ ಕಾರ್ಮಿಕರು. ಎಲ್ಲಿ ಮನೆ ಕಟ್ಟಬೇಕು, ಯಾವ ಜಾಗ ಸುರಕ್ಷಿತ ಎಂದು ನಮಗೆ ಹೇಗೆ ಗೊತ್ತಾಗಬೇಕು? ಉದ್ಯೋಗ ನಿಮಿತ್ತ ಯಾವುದು ಅನುಕೂಲವೋ ಅಲ್ಲಿ ಮನೆ ಮಾಡುತ್ತೇವೆ ಅಲ್ಲವೇ. ಲೇನ್ ಮನೆಗಳನ್ನು ಎಸ್ಟೇಟು ಮಾಲೀಕರೇ ನೋಡಿಕೊಡುತ್ತಾರೆ. ಈ ಬೆಟ್ಟವು ಕುಸಿಯುತ್ತದೆ ಎಂದು ಗೊತ್ತಿದ್ದರೂ ದುಡಿಮೆಗಾಗಿ ನಾವು ಇದನ್ನೇ ಅವಲಂಬಿಸಬೇಕು. ನಾನು ಕೆಲಸದ ನಿಮಿತ್ತ ಹೊರಗೆ ಹೋಗಿದ್ದೆ. ನನ್ನ ಮನೆ, ಅಣ್ಣನ ಮನೆ, ಮಗಳ ಮನೆಯೂ ಬೆಟ್ಟದಡಿ ಸಮಾಧಿಯಾಗಿದೆ. ಈಗ ಎಲ್ಲವನ್ನೂ ಮೊದಲಿನಿಂದ ಆರಂಭಿಸಬೇಕಾಗಿದೆ. ಈ ಹಿಂದೆ ಪೂತುಮಲೆ ಬೆಟ್ಟವು ಕುಸಿದಾಗಲೂ ಅನೇಕರು ಜೀವ ಕಳೆದುಕೊಂಡಿದ್ದರು. ಆಗಲೂ, ಬೆಟ್ಟದ ಮೇಲೆ ಮನೆ ಮಾಡಬೇಡಿ ಎನ್ನುತ್ತಿದ್ದರು. ಆದರೆ ದುಡಿಮೆಯ ಜಾಗ ಒಂದು ಕಡೆ, ವಸತಿಯ ಜಾಗ ಮತ್ತೆಲ್ಲೋ ದೂರದಲ್ಲಿದ್ದರೆ ಬದುಕು ಕಾರ್ಯಸಾಧುವಾಗುತ್ತದೆಯೆ ?

—ಅಬ್ದುಲ್ ಲತೀಫ್, ಕಾರ್ಮಿಕ



### ಊರೇ ಕಣ್ಮರೆಯಾಯಿತು...



ಅಕ್ಕನೊಡನೆ ದಿನವೂ ರಾತ್ರಿ ಮಾತನಾಡುವುದು ವಾಡಿಕೆ. ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಕಂಗಾಲಾಗಿ ಅಂದು ರಾತ್ರಿ ಅಕ್ಕನಿಗೆ ಕರೆ ಮಾಡಿದೆ. 'ನೀವು ಅಲ್ಲಿಂದ ಸುರಕ್ಷಿತ ಜಾಗಕ್ಕೆ ಹೋಗುವುದು ಒಳ್ಳೆಯದು' ಎಂದು ಹೇಳಿದೆ. ನಾವು ಆರಾಮವಾಗಿ ಮಾತನಾಡಿದರೂ, ನಮ್ಮ ಧ್ವನಿಯಲ್ಲಿ ಸ್ವಲ್ಪ ಭಯವಿತ್ತು. ಅದನ್ನು ತೋರಗೊಡದೇ 'ಹೆದರಬೇಡ, ಏನಾಗಲ್ಲ' ಎನ್ನುತ್ತಿದ್ದೆ. ನದಿಯ ನೀರು ಮೇಲೇರುತ್ತಿದ್ದಂತೆಯೇ ಮನೆಯ ಅಂಗಳಕ್ಕೆ ಬರುತ್ತಿತ್ತು. ನಾವೆಲ್ಲ ಗಂಟುಮೂಟೆ ಕಟ್ಟಿ ಟೆರೇಸಿಗೆ ಹೋಗಿ ಕುಳಿತಿದ್ದೆವು. ಆದರೆ ಆ ವಿಷಯವನ್ನು ಅಕ್ಕನಿಗೆ ಹೇಳಲು ಹೋಗಲಿಲ್ಲ. ಎಷ್ಟೇ ಪ್ರವಾಹ ಬಂದರೂ ಮನೆಯೊಳಗೆಲ್ಲ ನೀರು ತುಂಬಿ ಕೆಸರಾಗಬಹುದು, ಸಮಸ್ಯೆಯಾಗುತ್ತಿದೆ ಎಂದಷ್ಟೇ ನಾವು ನಿರೀಕ್ಷೆ ಮಾಡಿದ್ದೆವು. ಅಕ್ಕ ವಿಷಯ ಮರೆಸಲು ದಿನದ ಬೇರೆ ಕೆಲಸ ಕಾರ್ಯಗಳ ಬಗ್ಗೆ ಬೇರೆ ಏನೋ ಮಾತನಾಡುತ್ತಿದ್ದಳು. ನಾನು ಹೂಂಗುಟ್ಟುತ್ತಲೇ ಅಲ್ಲಿಯೇ ನಿದ್ದೆ ಹೋಗಿದ್ದೆ... ಬೆಳಿಗ್ಗೆ ಎದ್ದಾಗಲೇ ಗೊತ್ತಾಗಿದ್ದು ಅಕ್ಕ ವಾಸವಾಗಿದ್ದ ಊರೇ ಇಲ್ಲವಾಗಿದೆ ಎಂದು.

—ಪ್ರಶಾಂತ್, ಚೂರಲ್‌ಮಲ ನಿವಾಸಿ

### ಮಾಹಿತಿಗೆ ಅಲೆದಾಟ

ನಾಲ್ಕು ದಿನಗಳಿಂದ ನಾನು ಮೇಪಾಡಿ ಪರಿಹಾರ ಕ್ಯಾಂಪಿಗೆ ಬಂದು ಮನೆಯವರ ಮಾಹಿತಿ ಹುಡುಕುತ್ತಿದ್ದೇನೆ. ಹದಿನಾಲ್ಕು ವರ್ಷದ ಮಗಳು, ನನ್ನ ಅಪ್ಪ ಅಮ್ಮನ ಸುದ್ದಿಯೇ ಇನ್ನೂ ಗೊತ್ತಾಗಿಲ್ಲ. ಮೇಪಾಡಿ ಶಾಲೆಗೆ ಬಂದರೆ ಮಾಹಿತಿ ಸಿಗುತ್ತದೆ ಎಂದು ನಾನು ಇಲ್ಲಿ ಕಾಯುತ್ತಿದ್ದೇನೆ. ಸಮಯ ಕಳೆದಂತೆ ಅಳುವುದೂ ನನಗೆ ಸಾಧ್ಯವಾಗುತ್ತಿಲ್ಲ.

—ಸ್ವಾಮಿದಾಸ್, ಚೂರಲ್‌ಮಲ ನಿವಾಸಿ

ಹೆಲಿಕಾಪ್ಟರೋ ವಿಮಾನವೋ ಬೆಟ್ಟದ ಮೇಲೆ ಬಿದ್ದು ಬೆಟ್ಟ ಮಗುಚುತ್ತಿದೆ ಎಂದುಕೊಂಡೆ. ನೋಡುತ್ತಿದ್ದಂತೆಯೇ ಭಾರೀ ಬೆಟ್ಟವು ಮಗುಚುತ್ತಿದೆ ಎಂದು ಅರ್ಥವಾಯಿತು. ಕೂಡಲೇ ಅಕ್ಕಪಕ್ಕದಲ್ಲಿ ಮಲಗಿದ್ದವರನ್ನು ಎಬ್ಬಿಸಲು ಪ್ರಯತ್ನಿಸಿದೆ. ಭಯಕ್ಕೆ ಧ್ವನಿಯೇ ಹೊರಡಲಿಲ್ಲ. ಈಗ ನಾನು ಮಾತನಾಡುತ್ತಿರುವುದು ನನ್ನ ಧ್ವನಿಯಲ್ಲ. ಇಷ್ಟೇ ಸ್ವರ ಬರುತ್ತಿದೆ ನನಗೆ. ಮಗಳ ಮುಖ ನೋಡಿದರೆ ಸ್ವರ ಬಂದೀತೇ? ಇನ್ನೆಲ್ಲಿ ಬರುತ್ತಾಳೆ ಅವಳು. ನಾಲ್ಕು ದಿನವಾಗಿದೆ ನೋಡಿ. ಇನ್ನು ಯಾರೂ ಜೀವಸಹಿತ ಬರುತ್ತಾರೆ ಎಂಬ ಭರವಸೆಯಿಲ್ಲ. ಊರೇ ಹೋಯಿತು. ಊರಿನೊಳಗಿನ ಸಮಾಧಿಯೇ ಎದ್ದು ಬಂದು ಎಲ್ಲವನ್ನು ನುಂಗಿ ನಿಂತಂತೆ ಕಾಣುತ್ತಿದೆ. ಅಷ್ಟಾದರೆ ನಾನೇಕೆ ಉಳಿದೆ?''

ಚೂರಲ್‌ಮಲ ನಿವಾಸಿ ಬೃಷ್ನೇವು ತಮ್ಮ ಕುಟುಂಬವನ್ನು ನೆನಪಿಸಿಕೊಂಡು ದುಃಖಿಸಿ ದುಃಖಿಸಿ ಅಳುತ್ತಿದ್ದರು. ನತದೃಷ್ಟ ತಂದೆಗೆ, ಕುಟುಂಬವನ್ನು ಕಳೆದುಕೊಂಡ ಸಂತ್ರಸ್ತನಿಗೆ ಏನೆಂದು ಸಮಾಧಾನ ಹೇಳುವುದು?

ಬೃಷ್ನೇವು ಅವರ ತಂದೆ ಸೋವಿಯತ್ ಯೂನಿಯನ್ನಿನ ಅಧ್ಯಕ್ಷ ಲಿಯೋನಿಡ್ ಬೃಷ್ನೇವು ಅವರ ಹೆಸರನ್ನೇ ಮಗನಿಗೆ ಇಟ್ಟಿದ್ದರು. ಆದರೆ ತಂದೆ ತಾಯಿ, ಹೆಂಡತಿ, ನೆರೆಹೊರೆ, ಊರು ಎಲ್ಲವೂ ಕೊಚ್ಚಿಹೋದುದನ್ನು ಕಣ್ಣಾರೆ ಕಂಡು, ಆಘಾತವನ್ನು ತಡೆದುಕೊಳ್ಳಲು ಸಾಧ್ಯವಾಗದೇ ಅವರು ಒಂದು ಪರಿಹಾರ ಕ್ಯಾಂಪ್‌ನಿಂದ ಇನ್ನೊಂದು ಪರಿಹಾರ ಕ್ಯಾಂಪಿಗೆ ಅಲೆಯುತ್ತಿದ್ದಾರೆ. ಮನಸ್ಸಿನಲ್ಲಿ ಒಂದೇ ಧ್ಯಾನ, ಮೊಬೈಲ್‌ನಲ್ಲಿ ಚಾರ್ಜ್ ಖಾಲಿಯಾಗಬಾರದು, ಮಗಳ ಮುಖವನ್ನು ಪರಿಹಾರ ಕಾರ್ಯಾಚರಣೆಯಲ್ಲಿ ನಿರತರಾದವರಿಗೆ ತೋರಿಸಬೇಕು... 'ಇವಳನ್ನು ನೋಡಿದಿರಾ?' ಎಂದು ಕೇಳಬೇಕು. ಮೃತದೇಹಗಳನ್ನು ಇರಿಸಿದ ಜಾಗದಲ್ಲಿ ಸರತಿಯ ಸಾಲಿನಲ್ಲಿ ನಿಧಾನಕ್ಕೆ ಮುಂದೆ ಸಾಗುತ್ತ, ಒಂದೊಂದೇ ಮೃತದೇಹದ ಮುಖವನ್ನು ನೋಡಿ, ಇದು ತನ್ನ ಮಗಳಲ್ಲ ಎಂದು ಖಾತರಿ